**Prajavaani**

**Date:** 01-04-2022

**Page No:** 2

**Edition:** Mysore

**Language:** Kannada

ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದ ಪಂಕಜಂ ಶ್ರೀದೇವಿ

# 'ಕಠಿಣ ಪರಿಶ್ರಮಕ್ಕೆ ಪರ್ಯಾಯವಿಲ್ಲ'

ಪ್ರಜಾವಾಣಿ ವಾರ್ತೆ

**ಮೈಸೂರು:** 'ಜಗತ್ತಿನಲ್ಲಿ ಕಠಿಣ ಪರಿಶ್ರಮಕ್ಕೆ ಪರ್ಯಾಯವಾದುದು ಯಾವುದೂ ಇಲ್ಲ. ಅದೊಂದೇ ಯಶಸ್ಸಿನ ಕೀಲಿ ಕೈ' ಎಂದು ಕಾಮನ್‌ವೆಲ್ತ್ ಬ್ಯಾಂಕ್ ಆಫ್ ಆಸ್ಟ್ರೇಲಿಯಾ (ಭಾರತ)ದ ವ್ಯವಸ್ಥಾಪಕ ನಿರ್ದೇಶಕಿ ಪಂಕಜಂ ಶ್ರೀದೇವಿ ತಿಳಿಸಿದರು.

ಇಲ್ಲಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ (ಎಸ್‌ಡಿಎಂಐಎಂಡಿ) ಸಂಸ್ಥೆಯಲ್ಲಿ ಗುರುವಾರ ನಡೆದ 27ನೇ ಘಟಿಕೋತ್ಸವದಲ್ಲಿ ಅವರು ಮಾತನಾಡಿ, 'ಕಠಿಣ ಪರಿಶ್ರಮದ ಜತೆಗೆ ಬದ್ಧತೆಯೂ ಸೇರಿ ದೊಡ್ಡ ಕನಸುಗಳನ್ನು ಸಾಕಾರಗೊಳಿಸುವತ್ತ ಹೆಜ್ಜೆ ಇಟ್ಟರೆ ಯಶಸ್ಸು ಸಾಧ್ಯ' ಎಂದರು.

'ದೊಡ್ಡ ದೊಡ್ಡ ಸಾಧಕರೆಲ್ಲರೂ ಇದೇ ಬಗೆಯಲ್ಲಿ ದೊಡ್ಡ ಸ್ಥಾನಗಳಿಗೆ ಏರಿದ್ದಾರೆ. ವಿದ್ಯಾರ್ಥಿಗಳು ತಮಗಾಗಿ ನಿಸ್ವಾರ್ಥವಾಗಿ ದುಡಿಯುವ ಶಿಕ್ಷಕರ ಮಾತುಗಳನ್ನು ಕೇಳಬೇಕು' ಎಂದರು.

'ಬುದ್ಧಿವಂತಿಕೆ ಒಂದು ವಿಧದ ಉಡುಗೊರೆ, ಆದರೆ, ಒಳ್ಳೆಯತನ



ಮೈಸೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ (ಎಸ್‌ಡಿಎಂಐಎಂಡಿ) ಸಂಸ್ಥೆಯಲ್ಲಿ ಗುರುವಾರ ನಡೆದ 27ನೇ ಘಟಿಕೋತ್ಸವದಲ್ಲಿ ಚಿನ್ನದ ಪದಕ ಪಡೆದ ಅನಿರುದ್ಧ ಹಂದೆ, ಸಂಜನಾ ವಿಜಯಕುಮಾರ, ಸೀತಾಲಕ್ಷ್ಮೀ ಸತೀಶ್ ಹೆಗ್ಡೆ, ಪ್ರಕೃತಿ ವಿವೇಕಾನಂದ, ಎಂ.ಅಭಿನಯ, ಯಶಶರ್ಮಾ ಮುಕುಂದ್, ಸುದೀಪ್ ಎಸ್ ರಾವ್ ಅವರೊಂದಿಗೆ ಡಿ.ಸುರೇಂದ್ರಕುಮಾರ್, ಎನ್.ಆರ್.ಪರಶುರಾಮನ್, ಡಿ.ವೀರೇಂದ್ರ ಹೆಗ್ಗಡೆ, ಪಂಕಜಂ ಶ್ರೀದೇವಿ, ಕಮಲ್ ಬಾಲಿ, ವಿಜು ಪರಮೇಶ್ವರ್ ಇದ್ದಾರೆ

ಆಯ್ಕೆಯಾಗಿದೆ. ದೈನಂದಿನ ಬದುಕಿನಲ್ಲಿ, ಪ್ರತಿ ನಿಮಿಷದಲ್ಲಿ ನೀವು ಒಳ್ಳೆಯದನ್ನೇ ಆಯ್ಕೆ ಮಾಡಿಕೊಂಡರೆ ಸಾಧನೆ ಸಾಧ್ಯ' ಎಂದು ಹೇಳಿದರು.

'ಕೆಲಸಮತ್ತುಸ್ವಂತಬದುಕಿನನಡುವೆ ಸಮತೋಲನವಿರುವಂತೆ ನೋಡಿಕೊಳ್ಳಬೇಕು, ವಿಶೇಷವಾಗಿ ಮಹಿಳೆಯರಿಗೆ ಈ ಬಗೆಯ ಜವಾಬ್ದಾರಿ ಹೆಚ್ಚಿದೆ. ಹೊರದೇಶಗಳಲ್ಲಿ ಕಾರ್ಯ ನಿರ್ವಹಿಸುವಂತಹ ಅವಕಾಶಗಳನ್ನು ಅನೇಕ ಮಹಿಳೆಯರು ಕಳೆದುಕೊಳ್ಳುತ್ತಾರೆ. ಕುಟುಂಬದವರ ಜತೆಗೆ ಚರ್ಚಿಸಿ ಸೂಕ್ತ ತೀರ್ಮಾನ ಕೈಗೊಂಡರೆ ಎಲ್ಲವೂ ಸಾಧ್ಯ' ಎಂದರು.

'ನನಗೂ ಸ್ವಿಟ್ಜರ್‌ಲೆಂಡ್‌ನಲ್ಲಿ ಕಾರ್ಯನಿರ್ವಹಿಸುವ ಅವಕಾಶ ಸಿಕ್ಕಿತು. ಆಗ ನನ್ನ ಪತಿ 9 ವರ್ಷದ ಮಗುವನ್ನು ನೋಡಿಕೊಳ್ಳುವೆ ಎಂದು ಹೇಳಿದ್ದರು. ಒಬ್ಬಂಟಿಯಾಗಿ ಹೋಗಿ ಆ ದೇಶದಲ್ಲಿ ಕಾರ್ಯನಿರ್ವಹಿಸುವಾಗ ದಿನ ರಾತ್ರಿ ಮಗು, ಪತಿಯನ್ನು ನೆನೆದು ಅಳುತ್ತಿದ್ದೆ' ಎಂದು ನೆನಪುಗಳನ್ನು ಹಂಚಿಕೊಂಡರು.

'ಪಿಜಿ ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್ ಪೂರೈಸಿದ 181 ವಿದ್ಯಾರ್ಥಿಗಳು ಪದವಿ ಸ್ವೀಕರಿಸಿದರು. ಸಂಜನಾ ವಿಜಯಕುಮಾರ, ಅನಿರುದ್ಧ ಹೆಗಡೆ, ಸೀತಾಲಕ್ಷ್ಮೀ ಸತೀಶ್ ಹೆಗ್ಡೆ, ಯಶ್ ಶರ್ಮಾ ಮುಕುಂದ್, ಸುದೀಪ್ ಎಸ್ ರಾವ್, ಎಂ.ಅಭಿನಯ್, ಪ್ರಕೃತಿ ವಿವೇಕಾನಂದ ಚಿನ್ನದ ಪದಕ ಪಡೆದರು.

## 'ಕಲಿತ ಶೇ 30ರಷ್ಟು ಮಹಿಳೆಯರು ಮನೆಯಲ್ಲೇ'

ಶಿಕ್ಷಣ ಪಡೆದ ಶೇ 30ರಷ್ಟು ಮಹಿಳೆಯರು ಗೃಹಿಣಿಯರಾಗಿ ಮನೆಯಲ್ಲೇ ಇರುತ್ತಿದ್ದಾರೆ ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಬೇಸರ ವ್ಯಕ್ತಪಡಿಸಿದರು.

'ಸಂಸಾರವನ್ನು ನೋಡಿಕೊಂಡೇ ಹೊರಗಡೆ ಕೆಲಸ ಮಾಡಬಹುದು. ಸಮಾಜಕ್ಕೆ ಉನ್ನತವಾದ ಕೊಡುಗೆಗಳನ್ನು ಕೊಡಬಹುದು. ಏಕೆಂದರೆ, ಮಹಿಳೆಯರಲ್ಲಿ ಅಗಾಧ ಪ್ರತಿಭೆ ಇದೆ' ಎಂದರು.